ಶುಕ್ರವಾರ • ನವೆಂಬರ್ 12, 2021 ಪ್ರಜಾವಾಣಿ

## ಮಣಿಪಾಲ ಸಮಗ್ರ ಕ್ಯಾನ್ಸರ್ ಆರೈಕೆ ಕೇಂದ್ರದ ವಾರ್ಷಿಕೋತ್ಸವ

# ‘ಆರಂಭದಲ್ಲಿ ತಪಾಸಣೆ ಮಾಡಿಸಿ’

ಪ್ರಜಾವಾಣಿ ವಾರ್ತೆ

ಉಡುಪಿ: ಮಣಿಪಾಲದ ಕಸ್ತೂರಬಾ ಆಸ್ಪತ್ರೆಯ ಸಮಗ್ರ ಕ್ಯಾನ್ಸರ್ ಕೇರ್ ಸೆಂಟರ್‌ನ 3ನೇ ವಾರ್ಷಿಕೋತ್ಸವ ನಡೆಯಿತು.


ಯೂನಿಯನ್ ಫಾರ್ ಇಂಟರ್ ನ್ಯಾಷನಲ್ ಕ್ಯಾನ್ಸರ್ ಕಂಟ್ರೋಲ್ ಅಧ್ಯಕ್ಷ ಡಾ. ಅನಿಲ್ ಡಿಕ್ರೂಜ್, ಕ್ಯಾನ್ಸರ್ ತಡೆಯುವ ಪ್ರಾಮುಖ್ಯತೆ ಹಾಗೂ ಕ್ಯಾನ್ಸರ್ ಚಿಕಿತ್ಸೆಯ ವೆಚ್ಚ, ಪರಿಣಾಮಕಾರಿ ಕ್ಯಾನ್ಸರ್ ಸಂಶೋಧನೆ ಮತ್ತು ಗುಣಮಟ್ಟದ ಜೀವನ ಕ್ರಮಗಳ ಕುರಿತು ಮಾತನಾಡಿದರು.

ಮಾಹೆ ಟ್ರಸ್ಟಿ ವಸಂತಿ ಆರ್. ಪೈ ಗ್ಲೋಬಲ್ ಕ್ಯಾನ್ಸರ್ ಕನ್ಸೋರ್ಟಿಯಂಗೆ ಚಾಲನೆ ನೀಡಿ ಸಮುದಾಯ ಸಂಪರ್ಕ ಕಾರ್ಯಕ್ರಮಗಳ ಪ್ರಾಮುಖ್ಯತೆ ಮತ್ತು ಗ್ರಾಮೀಣ ಮಹಿಳೆಯರಿಗೆ ಆರೋಗ್ಯ ಶಿಕ್ಷಣದ ಮಹತ್ವ ಕುರಿತು ಮಾಹಿತಿ ನೀಡಿದರು.

ಮಾಹೆ ಕುಲಪತಿ ಎಂ.ಡಿ. ವೆಂಕಟೇಶ್, ಮಾಹೆಯ ಯೋಜನೆಗಳಾದ ಮಾರಣಾಂತಿಕ ಕಾಯಿಲೆಯ ರೋಗಿಗಳಿಗೆ ಅವಶ್ಯವಾದ ಮಣಿಪಾಲ್ ವಿಶ್ರಾಂತಿ ಮತ್ತು ಉಪಶಾಮಕ ಆರೈಕೆ ಕೇಂದ್ರ ಮತ್ತು ಕ್ಯಾನ್ಸರ್ ಪೀಡಿತ ಮಕ್ಕಳಿಗೆ ಹಾಗೂ ಕುಟುಂಬಗಳಿಗೆ ಸೌಲಭ್ಯದ ಕುರಿತು ತಿಳಿಸಿದರು.

ಕ್ಯಾನ್ಸರ್ ರೋಗಿಗಳಿಗೆ ಸಾಮಾಜಿಕ ಆರ್ಥಿಕ ಸ್ಥಿತಿ ಲೆಕ್ಕಿಸದೆ ಅತ್ಯುತ್ತಮ ಹಾಗೂ ಕೈಗೆಟುಕುವ ಗುಣಮಟ್ಟದ ಆರೈಕೆಯನ್ನು ಆಸ್ಪತ್ರೆ ನೀಡುತ್ತಾ ಬಂದಿದೆ ಎಂದರು.

ಕಸ್ತೂರಬಾ ವೈದ್ಯಕೀಯ ಕಾಲೇಜಿನ ಡೀನ್ ಡಾ.ಶರತ್ ಕುಮಾರ್ ಸ್ವಾಗತಿಸಿದರು. ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ್ ಶೆಟ್ಟಿ ವಂದಿಸಿದರು.



ಮಣಿಪಾಲದ ಕಸ್ತೂರಬಾ ಆಸ್ಪತ್ರೆಯ ಸಮಗ್ರ ಕ್ಯಾನ್ಸರ್ ಕೇರ್ ಸೆಂಟರ್‌ನ 3ನೇ ವಾರ್ಷಿಕೋತ್ಸವ ಈಚೆಗೆ ನಡೆಯಿತು.

### ಆರೈಕೆ, ಔಷಧೋಪಚಾರ

ಮಾಹೆ ಸಹ ಕುಲಪತಿ ಡಾ. ಪಿಎಲ್‌ಎನ್‌ಜಿ ರಾವ್, ಕ್ಯಾನ್ಸರ್ ಆರೈಕೆ ಹೆಚ್ಚಿಸಲು ಹೊಸ ಔಷಧ ಆವಿಷ್ಕಾರದ ಅಗತ್ಯತೆ ಮತ್ತು ಜನಸಂಖ್ಯೆಗೆ ಅನುಗುಣವಾಗಿ ಔಷಧಗಳ ಲಭ್ಯತೆ, ಕೈಗೆಟಕುವ ದರದ ಅವಶ್ಯಕತೆಗಳ ಕುರಿತು ಮಾತನಾಡಿದರು.

ಮಾಹೆ ಸಹ ಕುಲಾಧಿಪತಿ ಡಾ.ಎಚ್.ಎಸ್.ಬಲ್ಲಾಳ್ ‘ಕ್ಯಾನ್ಸರ್ ರೋಗವನ್ನು ಆರಂಭದಲ್ಲೇ ಪತ್ತೆ ಹಚ್ಚುವಿಕೆ, ಗುಣಮಟ್ಟದ ಚಿಕಿತ್ಸೆ ಮತ್ತು ಉಪಶಾಮಕ ಆರೈಕೆಯ ಅಗತ್ಯತೆ ತಿಳಿಸಿದರು.

### ವರ್ಚುವಲ್ ಸಮ್ಮೇಳನ

ಮಣಿಪಾಲ ಕಾಲೇಜ್ ಆಫ್ ಫಾರ್ಮಾಸ್ಯುಟಿಕಲ್ ಸೈನ್ಸಸ್‌ನ ಫಾರ್ಮಸಿ ಪ್ರಾಕ್ಟೀಸ್ ವಿಭಾಗದ ಪ್ರಾಧ್ಯಾಪಕ ಡಾ.ಮಹಾದೇವ ರಾವ್ ‘ಗ್ಲೋಬಲ್ ಕ್ಯಾನ್ಸರ್ ಕನ್ಸೋರ್ಟಿಯಂನ ವ್ಯಾಪ್ತಿ, ಚಟುವಟಿಕೆಗಳನ್ನು ವಿವರಿಸಿದರು. ಡಿ.2 ರಿಂದ 4 ರವರೆಗೆ ನಡೆಯುವ ವರ್ಚುವಲ್ ಸಮ್ಮೇಳನದ ಕುರಿತು ಮಾತನಾಡಿದರು.

ಉದಯವಾಣಿ ಸುದಿನ
ಮಣಿಪಾಲ
2021
ನವೆಂಬರ್ 12 ಶುಕ್ರವಾರ

## ▶ ಮಣಿಪಾಲ ಸಮಗ್ರ ಕ್ಯಾನ್ಸರ್ ಆರೈಕೆ ಕೇಂದ್ರದ ವಾರ್ಷಿಕೋತ್ಸವ

# ಜಾಗತಿಕ ಕ್ಯಾನ್ಸರ್ ಕನ್ಸೋರ್ಟಿಯಂ ಉದ್ಘಾಟನೆ



**ಉಡುಪಿ, ನ. 11:** ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯ ಮಣಿಪಾಲ ಸಮಗ್ರ ಕ್ಯಾನ್ಸರ್ ಕೇರ್ ಸೆಂಟರ್ (ಎಂಸಿಸಿಸಿಸಿ)ನ 3ನೇ ವಾರ್ಷಿಕೋತ್ಸವ ಮತ್ತು ಜಾಗತಿಕ ಕ್ಯಾನ್ಸರ್ ಕನ್ಸೋರ್ಟಿಯಂ ಉದ್ಘಾಟನೆ ಬುಧವಾರ ನಡೆಯಿತು.

ಮುಖ್ಯ ಅತಿಥಿ ಯೂನಿಯನ್ ಫಾರ್ ಇಂಟರ್‌ನ್ಯಾಶನಲ್ ಕ್ಯಾನ್ಸರ್ ಕಂಟ್ರೋಲ್ (ಯುಐಸಿಸಿ) ಅಧ್ಯಕ್ಷ, ಅಪೋಲೋ ಆಸ್ಪತ್ರೆಗಳ ಆಂಕೊಲಾಜಿ ವಿಭಾಗದ ನಿರ್ದೇಶಕ ಡಾ| ಅನಿಲ್ ಡಿ. ಕ್ರೂಜ್ ಮಾತನಾಡಿ, ಕ್ಯಾನ್ಸರ್ ತಡೆಗಟ್ಟುವ ಪ್ರಾಮುಖ್ಯತೆ, ಕ್ಯಾನ್ಸರ್ ಚಿಕಿತ್ಸೆಯಲ್ಲಿ ಸಮಾನತೆ, ಗುಣಮಟ್ಟದ ಜೀವನ ಕ್ರಮಗಳ ಕುರಿತು ಮಾಹಿತಿ ನೀಡಿದರು.

ಜಾಗತಿಕ ಕ್ಯಾನ್ಸರ್ ಕನ್ಸೋರ್ಟಿಯಂಗೆ ಚಾಲನೆ ನೀಡಿದ ಮಾಹೆ ಟಿ.ಟಿ. ಟ್ರಸ್ಟಿ ವಸಂತಿ ಆರ್. ಪೈ ಅವರು, ಸಮುದಾಯ ಸಂಪರ್ಕ ಕಾರ್ಯಕ್ರಮಗಳ ಪ್ರಾಮುಖ್ಯತೆ ಮತ್ತು ಕ್ಯಾನ್ಸರ್‌ಗೆ ವಿಶೇಷವಾಗಿ ಗ್ರಾಮೀಣ ಮಹಿಳೆಯರಿಗೆ ಆರೋಗ್ಯ ಶಿಕ್ಷಣ ನೀಡುವ ಬಗ್ಗೆ ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಮಾಹೆ ಟಿ.ಟಿ. ಸಹಕುಲಾಧಿಪತಿ ಡಾ| ಎಚ್.ಎಸ್. ಬಲ್ಲಾಳ್ ಅವರು, ಕಾನ್ಸರ್ ಅನ್ನು ಆರಂಭದಲ್ಲೇ ಪತ್ತೆ ಹಚ್ಚುವುದು, ಉತ್ತಮ ಗುಣಮಟ್ಟದ ಚಿಕಿತ್ಸೆ ಮತ್ತು ಉಪಶಾಮಕ ಆರೈಕೆಯ ಅಗತ್ಯದ ಬಗ್ಗೆ ತಿಳಿಸಿದರು.

ಕುಲಪತಿ ಲೆ|ಜ|ಡಾ| ಎಂ.ಡಿ. ವೆಂಕಟೇಶ್ ಅವರು, ಮಾಹೆಯ ಮುಂದಿನ ಯೋಜನೆಗಳಾದ ಮಾರಣಾಂತಿಕ ಕಾಯಿಲೆ ಇರುವ ರೋಗಿಗಳಿಗೆ ಅವಶ್ಯವಾದ ಮಣಿಪಾಲ್ ವಿಶ್ರಾಂತಿ ಮತ್ತು ಉಪಶಾಮಕ ಆರೈಕೆ ಕೇಂದ್ರ, ಕ್ಯಾನ್ಸರ್ ಪೀಡಿತ ಮಕ್ಕಳು ಮತ್ತು ಅವರ ಕುಟುಂಬಗಳಿಗೆ ಮನೆಯಿಂದ ಹೊರಗೆ ಮನೆ ಸೌಲಭ್ಯದ ಕುರಿತು ತಿಳಿಸಿದರು.

ಸಹಕುಲಪತಿ ಡಾ| ಪಿ.ಎಲ್.ಎನ್.ಜಿ. ರಾವ್ ಅವರು, ಕ್ಯಾನ್ಸರ್ ಆರೈಕೆಯನ್ನು ಹೆಚ್ಚಿಸಲು ಹೊಸ ಔಷಧ ಆವಿಷ್ಕಾರದ ಅಗತ್ಯತೆ ಕುರಿತು ಮಾಹಿತಿ ನೀಡಿದರು.

ಮಣಿಪಾಲ ಕಾಲೇಜ್ ಆಫ್ ಫಾರ್ಮಾಸ್ಯುಟಿಕಲ್ ಸೈನ್ಸ್‌ನ ಫಾರ್ಮಸಿ ಪ್ರಾಕ್ಟೀಸ್ ವಿಭಾಗದ ಪ್ರಾಧ್ಯಾಪಕ, ಮುಖ್ಯಸ್ಥ ಡಾ| ಮಹಾದೇವ ರಾವ್ ಒಕ್ಕೂಟದ ವೆಬ್‌ಸೈಟ್: www.glocacon.org ಅನ್ನು ಪ್ರಸ್ತುತಪಡಿಸಿದರು. ಕಳೆದ ವರ್ಷ ನಡೆದ ವಿವಿಧ ಸೆಮಿನಾರ್, ಸಮುದಾಯ ಸರಣಿ ಕಾರ್ಯಕ್ರಮ, ಸಣ್ಣ ವಿಚಾರ ಸಂಕಿರಣಗಳ ಕುರಿತು ವಿವರಿಸಿದರು. ಡಿ. 2ರಿಂದ 4ರ ವರೆಗೆ ನಡೆಯಲಿರುವ ಮೊದಲ ವರ್ಚುವಲ್ ಸಮ್ಮೇಳನದ ಕುರಿತು ತಿಳಿಸಿದರು.

ಕೆಎಂಸಿ ಡೀನ್ ಡಾ| ಶರತ್ ಕುಮಾರ್ ರಾವ್ ಸ್ವಾಗತಿಸಿ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ| ಅವಿನಾಶ್ ಶೆಟ್ಟಿ ವಂದಿಸಿದರು.

11th November 2021

# 3rd anniversary of the Manipal Comprehensive Cancer Care Centre held




Manipal, Nov 11, 2021: The 3rd-anniversary celebration of Manipal Comprehensive Cancer Care Centre (MCCCC) of Kasturba Hospital, Manipal was held on Nov 10.

Dr. Anil D Cruz, President, Union for International Cancer Control (UICC), Director of Oncology, Apollo Hospitals, Mumbai, Delhi and Chennai, and Former Director, Tata Memorial Hospital, Mumbai was the Chief Guest.

Vasanti R Pai, Trustee, MAHE Trust, Manipal, Lt. Gen. (Dr) M D Venkatesh – Vice-Chancellor, MAHE Manipal, Dr. PLNG Rao Pro-Vice-Chancellor, Faculty of Health Sciences MAHE Manipal were the Guests of honor. Dr. H S Ballal – Pro chancellor, MAHE Manipal presided over the function.

In his keynote address Dr. Anil D Cruz, emphasized the importance of Preventive Oncology, Treatment Equity in Cancer therapy, Cost-effective Innovative Cancer research, and focus on Quality-of-Life Initiatives.

Vasanti R Pai launched Global Cancer Consortium and in her speech. She stressed the importance of community outreach programs and health education for cancer, especially for rural women.

Lt. Gen. (Dr) M D Venkatesh discussed the upcoming projects of MAHE.

Dr P L N G Rao enlightened the gathering on the need for new drug discovery to enhance cancer care and its availability and affordability to the population at large.

In his presidential address, Dr. H S Ballal highlighted the need for early detection, access to quality treatment, and palliative care for far advanced diseases. He emphasized the humanitarian aspect of cancer care and how it should be intertwined with medical care.

Dr. Mahadev Rao, Professor, and Head of, Department of Pharmacy Practice, Manipal College of Pharmaceutical Sciences, described the Global Cancer Consortium and its collaborators, its scope, activities, and impact.

He presented the consortium website www.glocacon.org and updated on the various seminars, community outreach series, and mini symposiums held over the past year. He highlighted the forthcoming 1st virtual conference to be held from Dec 2 to 4.

In his welcome address, Dr. Sharath Kumar Rao, Dean, Kasturba Medical College, Manipal, highlighted the journey and development of the cancer center. Dr. Avinash Shetty, Medical superintendent, KH, Manipal, proposed the vote of thanks.

**Daijiworld**

**11th November 2021**

# Udupi: 3rd anniversary of MCCC celebrated, Global Cancer Consortium launched

Udupi, Nov 11: Manipal Comprehensive Cancer Care Centre (MCCCC) of Kasturba Hospital, Manipal celebrated its 3rd anniversary on November 10.

Dr Anil D'Cruz, president, Union for International Cancer Control (UICC), director of Oncology, Apollo Hospitals, Mumbai, Delhi and Chennai, and former director, Tata Memorial Hospital, Mumbai was the chief guest of the programme. Vasanti R Pai, trustee, MAHE Trust, Manipal, Lt Gen (Dr) M D Venkatesh, vice-chancellor, MAHE Manipal, and Dr P L N G Rao, pro-vice-chancellor, Faculty of Health Sciences MAHE Manipal were the guests of honour of the programme. Dr H S Ballal, pro chancellor, MAHE Manipal presided over the function.






Dr Anil D’Cruz, delivered the keynote speech. His particular emphasis was on the importance of Preventive Oncology, Treatment Equity in Cancer therapy, Cost-effective Innovative Cancer research, and focus on Quality-of-Life Initiatives.

Vasanti R Pai launched Global Cancer Consortium and in her speech, she emphasized the importance of community outreach programs and health education for cancer, especially for rural women.

Lt Gen (Dr) M D Venkatesh discussed the upcoming projects of MAHE like Manipal Hospice and Respite Centre for patients with a terminal illness and Home away from the Home facility for children with cancer and their families. He reiterated that all patients with cancer are being provided with the best possible affordable quality care irrespective of their socioeconomic status.

Dr P L N G Rao enlightened the gathering on the need for new drug discovery to enhance cancer care and its availability and affordability to the population at large.

In his presidential address Dr H S Ballal, emphasised the need for early detection, access to quality treatment and palliative care for far advanced diseases. He emphasized the humanitarian aspect of cancer care and how it should be intertwined with medical care.

Dr Mahadev Rao, professor and head of department of Pharmacy Practice, Manipal College of Pharmaceutical Sciences, described the Global Cancer Consortium and its collaborators, its scope, activities, and impact. He presented the consortium website www.glocacon.org and updated on the various seminars, community outreach series, and mini symposiums held over the past year. He highlighted the forthcoming 1st virtual conference to be held from December 2 to 4.

In his welcome address, Dr Sharath Kumar Rao, dean, Kasturba Medical College, Manipal, highlighted the journey and development of the cancer centre. Dr Avinash Shetty, medical superintendent, Kasturba Hospital, Manipal, proposed the vote of thanks.

PublicNext

**11th November 2021**

## ಮಣಿಪಾಲ: ಜಾಗತಿಕ ಕ್ಯಾನ್ಸರ್ ಕನ್ಸೋರ್ಟಿಯಂ ಉದ್ಘಾಟನೆ



ಮಣಿಪಾಲ:ಕಸ್ತೂರ್ಬಾ ಆಸ್ಪತ್ರೆ ಮಣಿಪಾಲದ ಮಣಿಪಾಲ್ ಸಮಗ್ರ ಕ್ಯಾನ್ಸರ್ ಕೇರ್ ಸೆಂಟರ್ (MCCCC) ತನ್ನ 3 ನೇ ವಾರ್ಷಿಕೋತ್ಸವವನ್ನು ಆಚರಿಸಿತು. ಡಾ. ಅನಿಲ್ ಡಿ ಕ್ರೂಜ್, ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದರು. ಶ್ರೀಮತಿ ವಸಂತಿ ಆರ್ ಪೈ, ಟ್ರಸ್ಟಿ, ಮಾಹೆ ಟ್ರಸ್ಟ್, ಮಣಿಪಾಲ, ಲೆಫ್ಟಿನೆಂಟ್ ಜನರಲ್ (ಡಾ) ಎಮ್ ಡಿ ವೆಂಕಟೇಶ್ - ಉಪಕುಲಪತಿ, ಮಾಹೆ ಮಣಿಪಾಲ, ಡಾ. ಪಿಎಲ್ಎನ್‌ಜಿ ರಾವ್ ಸಹ ಉಪಕುಲಪತಿಗಳು , ಆರೋಗ್ಯ ವಿಜ್ಞಾನ ವಿಭಾಗ, ಮಾಹೆ ಮಣಿಪಾಲ ಅವರು ಗೌರವ ಅತಿಥಿಗಳಾಗಿದ್ದರು. ಮಾಹೆ ಮಣಿಪಾಲದ ಸಹ ಕುಲಪತಿಗಳಾದ ಡಾ. ಎಚ್.ಎಸ್.ಬಲ್ಲಾಲ್ - ಅಧ್ಯಕ್ಷತೆ ವಹಿಸಿದ್ದರು.

ಡಾ.ಅನಿಲ್ ಡಿ ಕ್ರೂಜ್ ಮುಖ್ಯ ಭಾಷಣ ಮಾಡಿದರು. ಕ್ಯಾನ್ಸರ್ ತಡೆಗಟ್ಟುವ ಪ್ರಾಮುಖ್ಯತೆ, ಕ್ಯಾನ್ಸರ್ ಚಿಕಿತ್ಸೆಯಲ್ಲಿ ಚಿಕಿತ್ಸೆಯ ಸಮಾನತೆ , ವೆಚ್ಚ-ಪರಿಣಾಮಕಾರಿ ನವೀನ ಕ್ಯಾನ್ಸರ್ ಸಂಶೋಧನೆ ಮತ್ತು ಗುಣಮಟ್ಟದ ಜೀವನ ಕ್ರಮಗಳ ಕುರಿತು ಮಾತನಾಡಿದರು .
ಶ್ರೀಮತಿ ವಸಂತಿ ಆರ್ ಪೈ ಅವರು ಗ್ಲೋಬಲ್ ಕ್ಯಾನ್ಸರ್ ಕನ್ಸೋರ್ಟಿಯಮ್ ಗೆ ಚಾಲನೆ ನೀಡಿ ಮತ್ತು ತಮ್ಮ ಭಾಷಣದಲ್ಲಿ ಸಮುದಾಯ ಸಂಪರ್ಕ ಕಾರ್ಯಕ್ರಮಗಳ ಪ್ರಾಮುಖ್ಯತೆ ಮತ್ತು ಕ್ಯಾನ್ಸರ್ ಗೆ ವಿಶೇಷವಾಗಿ ಗ್ರಾಮೀಣ ಮಹಿಳೆಯರಿಗೆ ಆರೋಗ್ಯ ಶಿಕ್ಷಣದ ಮಹತ್ವವನ್ನು ಹೇಳಿದರು.

ಲೆಫ್ಟಿನೆಂಟ್ ಜನರಲ್ (ಡಾ) ಎಂ ಡಿ ವೆಂಕಟೇಶ್ ಅವರು ಮಾಹೆಯ ಮುಂಬರುವ ಯೋಜನೆಗಳಾದ ಮಾರಣಾಂತಿಕ ಕಾಯಿಲೆ ಇರುವ ರೋಗಿಗಳಿಗೆ ಅವಶ್ಯವಾದ ಮಣಿಪಾಲ್ ವಿಶ್ರಾಂತಿ ಮತ್ತು ಉಪಶಾಮಕ ಆರೈಕೆ ಕೇಂದ್ರ ಮತ್ತು ಕ್ಯಾನ್ಸರ್ ಪೀಡಿತ ಮಕ್ಕಳಿಗೆ ಮತ್ತು ಅವರ ಕುಟುಂಬಗಳಿಗೆ ಮನೆಯಿಂದ ಹೊರಗೆ ಮನೆ ಸೌಲಭ್ಯದ ಕುರಿತು ಚರ್ಚಿಸಿದರು. ಎಲ್ಲಾ ಕ್ಯಾನ್ಸರ್ ರೋಗಿಗಳಿಗೆ ಅವರ ಸಾಮಾಜಿಕ ಆರ್ಥಿಕ ಸ್ಥಿತಿಯನ್ನು ಲೆಕ್ಕಿಸದೆ ಅತ್ಯುತ್ತಮ ಕೈಗೆಟುಕುವ ಗುಣಮಟ್ಟದ ಆರೈಕೆಯನ್ನು ಒದಗಿಸಲಾಗುತ್ತಿದೆ ಎಂದು ಅವರು ಪುನರುಚ್ಚರಿಸಿದರು.

ಡಾ. ಪಿ ಎಲ್ ಎನ್ ಜಿ ರಾವ್ ಅವರು ಕ್ಯಾನ್ಸರ್ ಆರೈಕೆಯನ್ನು ಹೆಚ್ಚಿಸಲು ಹೊಸ ಔಷಧ ಆವಿಷ್ಕಾರದ ಅಗತ್ಯತೆ ಮತ್ತು ಜನಸಂಖ್ಯೆಗೆ ಅನುಗುಣವಾಗಿ ಅದರ ಲಭ್ಯತೆ ಮತ್ತು ಕೈಗೆಟಕುವ ದರದ ಅವಶ್ಯಕತೆಗಳ ಕುರಿತು ಮಾಹಿತಿ ನೀಡಿದರು.

**Namma Udupi Bulletin**

**11th November 2021**

# ಮಣಿಪಾಲದ ಸಮಗ್ರ ಕ್ಯಾನ್ಸರ್ ಆರೈಕೆ ಕೇಂದ್ರದ 3ನೇ ವಾರ್ಷಿಕೋತ್ಸವ




**ಮಣಿಪಾಲ:** ಕಸ್ತೂರ್ಬಾ ಆಸ್ಪತ್ರೆ ಮಣಿಪಾಲದ ಮಣಿಪಾಲ್ ಸಮಗ್ರ ಕ್ಯಾನ್ಸರ್ ಕೇರ್ ಸೆಂಟರ್ ಇದರ 3ನೇ ವಾರ್ಷಿಕೋತ್ಸವ ಕಾರ್ಯಕ್ರಮ ನಡೆಯಿತು.

ಯೂನಿಯನ್ ಫಾರ್ ಇಂಟರ್ನ್ಯಾಷನಲ್ ಕ್ಯಾನ್ಸರ್ ಕಂಟ್ರೋಲ್ ಆಂಕೊಲಾಜಿ ಅಧ್ಯಕ್ಷರು, ಅಪೋಲೋ ಆಸ್ಪತ್ರೆಗಳು ಮುಂಬೈ, ದೆಹಲಿ ಮತ್ತು ಚೆನ್ನೈ ನಿರ್ದೇಶಕ ಹಾಗೂ ಟಾಟಾ ಮೆಮೋರಿಯಲ್ ಆಸ್ಪತ್ರೆ ಮುಂಬೈ ಮಾಜಿ ನಿರ್ದೇಶಕರಾದ ಡಾ. ಅನಿಲ್ ಡಿ ಕ್ರೂಜ್ ಇವರು ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದರು.




ಮಾಹೆ ಟ್ರಸ್ಟ್ ಮಣಿಪಾಲ ಟ್ರಸ್ಟಿ ವಸಂತಿ ಆರ್ ಪೈ, ಮಾಹೆ ಮಣಿಪಾಲ ಉಪಕುಲಪತಿ ಲೆಫ್ಟಿನೆಂಟ್ ಜನರಲ್ (ಡಾ) ಎಮ್ ಡಿ ವೆಂಕಟೇಶ್, ಸಹ ಉಪಕುಲಪತಿ ಡಾ. ಪಿಎಲ್‌ಎನ್‌ಜಿ ರಾವ್ ಗೌರವ ಅತಿಥಿಗಳಾಗಿದ್ದರು. ಮಾಹೆ ಮಣಿಪಾಲದ ಸಹ ಕುಲಪತಿಗಳಾದ ಡಾ. ಎಚ್.ಎಸ್.ಬಲ್ಲಾಳ್ ಅಧ್ಯಕ್ಷತೆ ವಹಿಸಿದ್ದರು.

ಡಾ. ಅನಿಲ್ ಡಿ ಕ್ರೂಜ್ ಮುಖ್ಯ ಭಾಷಣ ಮಾಡಿದರು. ಕ್ಯಾನ್ಸರ್ ತಡೆಗಟ್ಟುವ ಪ್ರಾಮುಖ್ಯತೆ, ಕ್ಯಾನ್ಸರ್ ಚಿಕಿತ್ಸೆಯಲ್ಲಿ ಚಿಕಿತ್ಸೆಯ ಸಮಾನತೆ, ವೆಚ್ಚ-ಪರಿಣಾಮಕಾರಿ ನವೀನ ಕ್ಯಾನ್ಸರ್ ಸಂಶೋಧನೆ ಮತ್ತು ಗುಣಮಟ್ಟದ ಜೀವನ ಕ್ರಮಗಳ ಕುರಿತು ಮಾತನಾಡಿದರು.

ವಸಂತಿ ಆರ್ ಪೈ ಅವರು ಗ್ಲೋಬಲ್ ಕ್ಯಾನ್ಸರ್ ಕನ್ಸೋರ್ಟಿಯಮ್ ಗೆ ಚಾಲನೆ ನೀಡಿ ಮತ್ತು ತಮ್ಮ ಭಾಷಣದಲ್ಲಿ ಸಮುದಾಯ ಸಂಪರ್ಕ ಕಾರ್ಯಕ್ರಮಗಳ ಪ್ರಾಮುಖ್ಯತೆ ಮತ್ತು ಕ್ಯಾನ್ಸರ್ ಗೆ ವಿಶೇಷವಾಗಿ ಗ್ರಾಮೀಣ ಮಹಿಳೆಯರಿಗೆ ಆರೋಗ್ಯ ಶಿಕ್ಷಣದ ಮಹತ್ವವನ್ನು ಒತ್ತಿ ಹೇಳಿದರು.

ಲೆಫ್ಟಿನೆಂಟ್ ಜನರಲ್ (ಡಾ) ಎಂ ಡಿ ವೆಂಕಟೇಶ್ ಅವರು ಮಾಹೆಯ ಮುಂಬರುವ ಯೋಜನೆಗಳಾದ ಮಾರಣಾಂತಿಕ ಕಾಯಿಲೆ ಇರುವ ರೋಗಿಗಳಿಗೆ ಅವಶ್ಯವಾದ ಮಣಿಪಾಲ್ ವಿಶ್ರಾಂತಿ ಮತ್ತು ಉಪಶಾಮಕ ಆರೈಕೆ ಕೇಂದ್ರ ಮತ್ತು ಕ್ಯಾನ್ಸರ್ ಪೀಡಿತ ಮಕ್ಕಳಿಗೆ ಮತ್ತು ಅವರ ಕುಟುಂಬಗಳಿಗೆ ಮನೆಯಿಂದ ಹೊರಗೆ ಮನೆ ಸೌಲಭ್ಯದ ಕುರಿತು ಚರ್ಚಿಸಿದರು. ಎಲ್ಲಾ ಕ್ಯಾನ್ಸರ್ ರೋಗಿಗಳಿಗೆ ಅವರ ಸಾಮಾಜಿಕ ಆರ್ಥಿಕ ಸ್ಥಿತಿಯನ್ನು ಲೆಕ್ಕಿಸದೆ ಅತ್ಯುತ್ತಮ ಕೈಗೆಟುಕುವ ಗುಣಮಟ್ಟದ ಆರೈಕೆಯನ್ನು ಒದಗಿಸಲಾಗುತ್ತಿದೆ ಎಂದು ಅವರು ಪುನರುಚ್ಚರಿಸಿದರು.

ಡಾ. ಪಿ ಎಲ್ ಎನ್ ಜಿ ರಾವ್ ಅವರು ಕ್ಯಾನ್ಸರ್ ಆರೈಕೆಯನ್ನು ಹೆಚ್ಚಿಸಲು ಹೊಸ ಔಷಧ ಆವಿಷ್ಕಾರದ ಅಗತ್ಯತೆ ಮತ್ತು ಜನಸಂಖ್ಯೆಗೆ ಅನುಗುಣವಾಗಿ ಅದರ ಲಭ್ಯತೆ ಮತ್ತು ಕೈಗೆಟಕುವ ದರದ ಅವಶ್ಯಕತೆಗಳ ಕುರಿತು ಮಾಹಿತಿ ನೀಡಿದರು.

ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಡಾ. ಹೆಚ್.ಎಸ್.ಬಲ್ಲಾಳ್ ಅವರು, ಆರಂಭದಲ್ಲೇ ಪತ್ತೆ ಹಚ್ಚುವುದು, ಉತ್ತಮ ಗುಣಮಟ್ಟದ ಚಿಕಿತ್ಸೆ ಮತ್ತು ಉಪಶಾಮಕ ಆರೈಕೆಯ ಅಗತ್ಯವನ್ನು ಒತ್ತಿ ಹೇಳಿದರು. ಅವರು ಕ್ಯಾನ್ಸರ್ ಆರೈಕೆಗೆ ಅವಶ್ಯವಿರುವ ಮಾನವೀಯ ಅಂಶ ಮತ್ತು ಅದನ್ನು ವೈದ್ಯಕೀಯ ಆರೈಕೆಯೊಂದಿಗೆ ಹೇಗೆ ಹೆಣೆದುಕೊಂಡಿರಬೇಕು ಎಂಬುವುದರ ಕುರಿತು ಒತ್ತಿ ಹೇಳಿದರು.

ಮಣಿಪಾಲ ಕಾಲೇಜ್ ಆಫ್ ಫಾರ್ಮಾಸ್ಯುಟಿಕಲ್ ಸೈನ್ಸಸ್‌ನ ಫಾರ್ಮಸಿ ಪ್ರಾಕ್ಟೀಸ್ ವಿಭಾಗದ ಪ್ರಾಧ್ಯಾಪಕ ಮತ್ತು ಮುಖ್ಯಸ್ಥ ಡಾ.ಮಹಾದೇವ ರಾವ್ ಅವರು ಗ್ಲೋಬಲ್ ಕ್ಯಾನ್ಸರ್ ಕನ್ಸೋರ್ಟಿಯಂ ಮತ್ತು ಅದರ ಸಹಯೋಗಿಗಳು, ಅದರ ವ್ಯಾಪ್ತಿ, ಚಟುವಟಿಕೆಗಳು ಮತ್ತು ಪರಿಣಾಮವನ್ನು ವಿವರಿಸಿದರು. ಅವರು ಒಕ್ಕೂಟದ ವೆಬ್‌ಸೈಟ್ http://www.glocacon.org ಅನ್ನು ಪ್ರಸ್ತುತಪಡಿಸಿದರು ಮತ್ತು ಕಳೆದ ವರ್ಷದಲ್ಲಿ ನಡೆದ ವಿವಿಧ ಸೆಮಿನಾರ್‌ಗಳು, ಸಮುದಾಯ ಸರಣಿ ಕಾರ್ಯಕ್ರಮಗಳು ಮತ್ತು ಸಣ್ಣ ವಿಚಾರ ಸಂಕಿರಣಗಳ ಕುರಿತು ವಿವರಿಸಿದರು. 2021 ರ ಡಿಸೆಂಬರ್ 2 ರಿಂದ 4 ರವರೆಗೆ ನಡೆಯಲಿರುವ ಮುಂಬರುವ ಮೊದಲ ವರ್ಚುವಲ್ ಸಮ್ಮೇಳನದ ಕುರಿತು ಮಾತನಾಡಿದರು.

ಮಣಿಪಾಲದ ಕಸ್ತೂರ್ಬಾ ವೈದ್ಯಕೀಯ ಕಾಲೇಜಿನ ಡೀನ್ ಡಾ.ಶರತ್ ಕುಮಾರ್ ರಾವ್ ಅವರು ತಮ್ಮ ಸ್ವಾಗತ ಭಾಷಣದಲ್ಲಿ ಮಣಿಪಾಲದ ಕ್ಯಾನ್ಸರ್ ಕೇಂದ್ರದ ಪಯಣ ಮತ್ತು ಬೆಳವಣಿಗೆಯನ್ನು ತಿಳಿಸಿದರು. ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ್ ಶೆಟ್ಟಿ ವಂದನಾರ್ಪಣೆಗೈದರು.

**KaravaliXpress**

**11th November 2021**


ಸುದ್ದಿ

# ಮಣಿಪಾಲದ ಸಮಗ್ರ ಕ್ಯಾನ್ಸರ್ ಆರೈಕೆ ಕೇಂದ್ರದ 3ನೇ ವಾರ್ಷಿಕೋತ್ಸವ ಮತ್ತು ಜಾಗತಿಕ ಕ್ಯಾನ್ಸರ್ ಕನ್ಸೋರ್ಟಿಯಂ ಉದ್ಘಾಟನೆ

By *Janardhan Kodavoor/Team karavalixpress*, November 11, 2021



ಮಣಿಪಾಲ :ಕಸ್ತೂರ್ಬಾ ಆಸ್ಪತ್ರೆ ಮಣಿಪಾಲದ ಮಣಿಪಾಲ್ ಸಮಗ್ರ ಕ್ಯಾನ್ಸರ್ ಕೇರ್ ಸೆಂಟರ್ (MCCCC) ತನ್ನ 3 ನೇ ವಾರ್ಷಿಕೋತ್ಸವವನ್ನು 10 ನೇ ನವೆಂಬರ್ 2021 ರಂದು ಆಚರಿಸಿತು. ಡಾ. ಅನಿಲ್ ಡಿ ಕ್ರೂಜ್, ಅಧ್ಯಕ್ಷರು ಯೂನಿಯನ್ ಫಾರ್ ಇಂಟರ್ನ್ಯಾಷನಲ್ ಕ್ಯಾನ್ಸರ್ ಕಂಟ್ರೋಲ್ (UICC), ಆಂಕೊಲಾಜಿ ನಿರ್ದೇಶಕರು -ಅಪೋಲೋ ಆಸ್ಪತ್ರೆಗಳು, ಮುಂಬೈ, ದೆಹಲಿ ಮತ್ತು ಚೆನ್ನೈ , ಹಾಗೂ ಮಾಜಿ ನಿರ್ದೇಶಕರು, ಟಾಟಾ ಮೆಮೋರಿಯಲ್ ಆಸ್ಪತ್ರೆ, ಮುಂಬೈ ಇವರು ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದರು.



ಶ್ರೀಮತಿ ವಸಂತಿ ಆರ್ ಪೈ, ಟ್ರಸ್ಟಿ, ಮಾಹೆ ಟ್ರಸ್ಟ್, ಮಣಿಪಾಲ, ಲೆಫ್ಟಿನೆಂಟ್ ಜನರಲ್ (ಡಾ) ಎಮ್ ಡಿ ವೆಂಕಟೇಶ್ – ಉಪಕುಲಪತಿ, ಮಾಹೆ ಮಣಿಪಾಲ, ಡಾ. ಪಿಎಲ್ಎನ್‌ಜಿ ರಾವ್ ಸಹ ಉಪಕುಲಪತಿಗಳು , ಆರೋಗ್ಯ ವಿಜ್ಞಾನ ವಿಭಾಗ, ಮಾಹೆ ಮಣಿಪಾಲ ಅವರು ಗೌರವ ಅತಿಥಿಗಳಾಗಿದ್ದರು. ಮಾಹೆ ಮಣಿಪಾಲದ ಸಹ ಕುಲಪತಿಗಳಾದ ಡಾ. ಎಚ್.ಎಸ್.ಬಲ್ಲಾಲ್ – ಅಧ್ಯಕ್ಷತೆ ವಹಿಸಿದ್ದರು.

ಡಾ.ಅನಿಲ್ ಡಿ ಕ್ರೂಜ್ ಮುಖ್ಯ ಭಾಷಣ ಮಾಡಿದರು. ಕ್ಯಾನ್ಸರ್ ತಡೆಗಟ್ಟುವ  ಪ್ರಾಮುಖ್ಯತೆ, ಕ್ಯಾನ್ಸರ್ ಚಿಕಿತ್ಸೆಯಲ್ಲಿ ಚಿಕಿತ್ಸೆಯ ಸಮಾನತೆ, ವೆಚ್ಚ-ಪರಿಣಾಮಕಾರಿ ನವೀನ ಕ್ಯಾನ್ಸರ್ ಸಂಶೋಧನೆ ಮತ್ತು ಗುಣಮಟ್ಟದ ಜೀವನ ಕ್ರಮಗಳ ಕುರಿತು ಮಾತನಾಡಿದರು.

ಶ್ರೀಮತಿ ವಸಂತಿ ಆರ್ ಪೈ ಅವರು ಗ್ಲೋಬಲ್ ಕ್ಯಾನ್ಸರ್ ಕನ್ಸೋರ್ಟಿಯಮ್ ಗೆ ಚಾಲನೆ ನೀಡಿ ಮತ್ತು ತಮ್ಮ ಭಾಷಣದಲ್ಲಿ  ಸಮುದಾಯ ಸಂಪರ್ಕ ಕಾರ್ಯಕ್ರಮಗಳ ಪ್ರಾಮುಖ್ಯತೆ ಮತ್ತು ಕ್ಯಾನ್ಸರ್ ಗೆ ವಿಶೇಷವಾಗಿ ಗ್ರಾಮೀಣ ಮಹಿಳೆಯರಿಗೆ ಆರೋಗ್ಯ ಶಿಕ್ಷಣದ ಮಹತ್ವವನ್ನು ಒತ್ತಿ ಹೇಳಿದರು.

ಲೆಫ್ಟಿನೆಂಟ್ ಜನರಲ್ (ಡಾ) ಎಂ ಡಿ ವೆಂಕಟೇಶ್ ಅವರು ಮಾಹೆಯ ಮುಂಬರುವ ಯೋಜನೆಗಳಾದ ಮಾರಣಾಂತಿಕ ಕಾಯಿಲೆ ಇರುವ ರೋಗಿಗಳಿಗೆ ಅವಶ್ಯವಾದ ಮಣಿಪಾಲ್ ವಿಶ್ರಾಂತಿ ಮತ್ತು ಉಪಶಾಮಕ ಆರೈಕೆ ಕೇಂದ್ರ ಮತ್ತು ಕ್ಯಾನ್ಸರ್ ಪೀಡಿತ ಮಕ್ಕಳಿಗೆ ಮತ್ತು ಅವರ ಕುಟುಂಬಗಳಿಗೆ ಮನೆಯಿಂದ ಹೊರಗೆ ಮನೆ  ಸೌಲಭ್ಯದ ಕುರಿತು ಚರ್ಚಿಸಿದರು. ಎಲ್ಲಾ ಕ್ಯಾನ್ಸರ್ ರೋಗಿಗಳಿಗೆ ಅವರ ಸಾಮಾಜಿಕ ಆರ್ಥಿಕ ಸ್ಥಿತಿಯನ್ನು ಲೆಕ್ಕಿಸದೆ ಅತ್ಯುತ್ತಮ ಕೈಗೆಟುಕುವ ಗುಣಮಟ್ಟದ ಆರೈಕೆಯನ್ನು ಒದಗಿಸಲಾಗುತ್ತಿದೆ ಎಂದು ಅವರು ಪುನರುಚ್ಚರಿಸಿದರು.

ಡಾ. ಪಿ ಎಲ್ ಎನ್ ಜಿ ರಾವ್ ಅವರು ಕ್ಯಾನ್ಸರ್ ಆರೈಕೆಯನ್ನು ಹೆಚ್ಚಿಸಲು ಹೊಸ ಔಷಧ ಆವಿಷ್ಕಾರದ ಅಗತ್ಯತೆ ಮತ್ತು ಜನಸಂಖ್ಯೆಗೆ ಅನುಗುಣವಾಗಿ ಅದರ ಲಭ್ಯತೆ ಮತ್ತು ಕೈಗೆಟಕುವ ದರದ ಅವಶ್ಯಕತೆಗಳ ಕುರಿತು ಮಾಹಿತಿ ನೀಡಿದರು.

ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಡಾ. ಹೆಚ್.ಎಸ್.ಬಲ್ಲಾಳ್ ಅವರು, “ಆರಂಭದಲ್ಲೇ ಪತ್ತೆ ಹಚ್ಚುವುದು, ಉತ್ತಮ ಗುಣಮಟ್ಟದ ಚಿಕಿತ್ಸೆ ಮತ್ತು ಉಪಶಾಮಕ ಆರೈಕೆಯ ಅಗತ್ಯವನ್ನು ಒತ್ತಿ ಹೇಳಿದರು. ಅವರು ಕ್ಯಾನ್ಸರ್ ಆರೈಕೆಗೆ ಅವಶ್ಯವಿರುವ  ಮಾನವೀಯ ಅಂಶ ಮತ್ತು ಅದನ್ನು ವೈದ್ಯಕೀಯ ಆರೈಕೆಯೊಂದಿಗೆ ಹೇಗೆ ಹೆಣೆದುಕೊಂಡಿರಬೇಕು ಎಂಬುವುದರ ಕುರಿತು ಒತ್ತಿ ಹೇಳಿದರು.

ಮಣಿಪಾಲ ಕಾಲೇಜ್ ಆಫ್ ಫಾರ್ಮಾಸ್ಯುಟಿಕಲ್ ಸೈನ್ಸಸ್‌ನ ಫಾರ್ಮಸಿ ಪ್ರಾಕ್ಟೀಸ್ ವಿಭಾಗದ ಪ್ರಾಧ್ಯಾಪಕ ಮತ್ತು ಮುಖ್ಯಸ್ಥ ಡಾ.ಮಹಾದೇವ ರಾವ್ ಅವರು ಗ್ಲೋಬಲ್ ಕ್ಯಾನ್ಸರ್ ಕನ್ಸೋರ್ಟಿಯಂ ಮತ್ತು ಅದರ ಸಹಯೋಗಿಗಳು, ಅದರ ವ್ಯಾಪ್ತಿ, ಚಟುವಟಿಕೆಗಳು ಮತ್ತು ಪರಿಣಾಮವನ್ನು ವಿವರಿಸಿದರು.

ಅವರು ಒಕ್ಕೂಟದ ವೆಬ್‌ಸೈಟ್ www.glocacon.org ಅನ್ನು ಪ್ರಸ್ತುತಪಡಿಸಿದರು ಮತ್ತು ಕಳೆದ ವರ್ಷದಲ್ಲಿ ನಡೆದ ವಿವಿಧ ಸೆಮಿನಾರ್‌ಗಳು, ಸಮುದಾಯ  ಸರಣಿ ಕಾರ್ಯಕ್ರಮಗಳು  ಮತ್ತು ಸಣ್ಣ ವಿಚಾರ ಸಂಕಿರಣಗಳ ಕುರಿತು ವಿವರಿಸಿದರು. 2021 ರ ಡಿಸೆಂಬರ್ 2 ರಿಂದ 4 ರವರೆಗೆ ನಡೆಯಲಿರುವ ಮುಂಬರುವ ಮೊದಲ ವರ್ಚುವಲ್ ಸಮ್ಮೇಳನದ ಕುರಿತು ಮಾತನಾಡಿದರು.

ಮಣಿಪಾಲದ ಕಸ್ತೂರ್ಬಾ ವೈದ್ಯಕೀಯ ಕಾಲೇಜಿನ ಡೀನ್ ಡಾ.ಶರತ್ ಕುಮಾರ್ ರಾವ್ ಅವರು ತಮ್ಮ ಸ್ವಾಗತ ಭಾಷಣದಲ್ಲಿ ಮಣಿಪಾಲದ ಕ್ಯಾನ್ಸರ್ ಕೇಂದ್ರದ ಪಯಣ ಮತ್ತು ಬೆಳವಣಿಗೆಯನ್ನು ತಿಳಿಸಿದರು. ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ್ ಶೆಟ್ಟಿ ವಂದನಾರ್ಪಣೆಗೈದರು.

Mangalorean

**11th November 2021**

# ಮಣಿಪಾಲದ ಸಮಗ್ರ ಕ್ಯಾನ್ಸರ್ ಆರೈಕೆ ಕೇಂದ್ರದ 3ನೇ ವಾರ್ಷಿಕೋತ್ಸವ ಮತ್ತು ಜಾಗತಿಕ ಕ್ಯಾನ್ಸರ್ ಕನ್ಸೋರ್ಟಿಯಂ ಉದ್ಘಾಟನೆ

By **Press Release** - November 11, 2021



**Spread the love**

Share Like Tweet

## ಮಣಿಪಾಲದ ಸಮಗ್ರ ಕ್ಯಾನ್ಸರ್ ಆರೈಕೆ ಕೇಂದ್ರದ 3ನೇ ವಾರ್ಷಿಕೋತ್ಸವ ಮತ್ತು ಜಾಗತಿಕ ಕ್ಯಾನ್ಸರ್ ಕನ್ಸೋರ್ಟಿಯಂ ಉದ್ಘಾಟನೆ

ಮಣಿಪಾಲ:ಕಸ್ತೂರ್ಬಾ ಆಸ್ಪತ್ರೆ ಮಣಿಪಾಲದ ಮಣಿಪಾಲ್ ಸಮಗ್ರ ಕ್ಯಾನ್ಸರ್ ಕೇರ್ ಸೆಂಟರ್ (MCCCC) ತನ್ನ 3 ನೇ ವಾರ್ಷಿಕೋತ್ಸವವನ್ನು 10 ನೇ ನವೆಂಬರ್ 2021 ರಂದು ಆಚರಿಸಿತು. ಡಾ. ಅನಿಲ್ ಡಿ ಕ್ರೂಜ್, ಅಧ್ಯಕ್ಷರು ಯೂನಿಯನ್ ಫಾರ್ ಇಂಟರ್ನ್ಯಾಷನಲ್ ಕ್ಯಾನ್ಸರ್ ಕಂಟ್ರೋಲ್ (UICC), ಆಂಕೊಲಾಜಿ ನಿರ್ದೇಶಕರು -ಅಪೋಲೋ ಆಸ್ಪತ್ರೆಗಳು, ಮುಂಬೈ, ದೆಹಲಿ ಮತ್ತು ಚೆನ್ನೈ , ಹಾಗೂ ಮಾಜಿ ನಿರ್ದೇಶಕರು, ಟಾಟಾ ಮೆಮೋರಿಯಲ್ ಆಸ್ಪತ್ರೆ, ಮುಂಬೈ ಇವರು ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದರು. ಶ್ರೀಮತಿ ವಸಂತಿ ಆರ್ ಪೈ, ಟ್ರಸ್ಟಿ, ಮಾಹೆ ಟ್ರಸ್ಟ್, ಮಣಿಪಾಲ, ಲೆಫ್ಟಿನೆಂಟ್ ಜನರಲ್ (ಡಾ) ಎಮ್ ಡಿ ವೆಂಕಟೇಶ್ - ಉಪಕುಲಪತಿ, ಮಾಹೆ ಮಣಿಪಾಲ, ಡಾ. ಪಿಎಲ್ಎನ್‌ಜಿ ರಾವ್ ಸಹ ಉಪಕುಲಪತಿಗಳು , ಆರೋಗ್ಯ ವಿಜ್ಞಾನ ವಿಭಾಗ, ಮಾಹೆ ಮಣಿಪಾಲ ಅವರು ಗೌರವ ಅತಿಥಿಗಳಾಗಿದ್ದರು. ಮಾಹೆ ಮಣಿಪಾಲದ ಸಹ ಕುಲಪತಿಗಳಾದ ಡಾ. ಎಚ್.ಎಸ್.ಬಲ್ಲಾಲ್ - ಅಧ್ಯಕ್ಷತೆ ವಹಿಸಿದ್ದರು.



ಡಾ.ಅನಿಲ್ ಡಿ ಕ್ರೂಜ್ ಮುಖ್ಯ ಭಾಷಣ ಮಾಡಿದರು. ಕ್ಯಾನ್ಸರ್ ತಡೆಗಟ್ಟುವ ಪ್ರಾಮುಖ್ಯತೆ, ಕ್ಯಾನ್ಸರ್ ಚಿಕಿತ್ಸೆಯಲ್ಲಿ ಚಿಕಿತ್ಸೆಯ ಸಮಾನತೆ , ವೆಚ್ಚ-ಪರಿಣಾಮಕಾರಿ ನವೀನ ಕ್ಯಾನ್ಸರ್ ಸಂಶೋಧನೆ ಮತ್ತು ಗುಣಮಟ್ಟದ ಜೀವನ ಕ್ರಮಗಳ ಕುರಿತು ಮಾತನಾಡಿದರು .

ಶ್ರೀಮತಿ ವಸಂತಿ ಆರ್ ಪೈ ಅವರು ಗ್ಲೋಬಲ್ ಕ್ಯಾನ್ಸರ್ ಕನ್ಸೋರ್ಟಿಯಮ್ ಗೆ ಚಾಲನೆ ನೀಡಿ ಮತ್ತು ತಮ್ಮ ಭಾಷಣದಲ್ಲಿ ಸಮುದಾಯ ಸಂಪರ್ಕ ಕಾರ್ಯಕ್ರಮಗಳ ಪ್ರಾಮುಖ್ಯತೆ ಮತ್ತು ಕ್ಯಾನ್ಸರ್ ಗೆ ವಿಶೇಷವಾಗಿ ಗ್ರಾಮೀಣ ಮಹಿಳೆಯರಿಗೆ ಆರೋಗ್ಯ ಶಿಕ್ಷಣದ ಮಹತ್ವವನ್ನು ಒತ್ತಿ ಹೇಳಿದರು.

ಲೆಫ್ಟಿನೆಂಟ್ ಜನರಲ್ (ಡಾ) ಎಂ ಡಿ ವೆಂಕಟೇಶ್ ಅವರು ಮಾಹೆಯ ಮುಂಬರುವ ಯೋಜನೆಗಳಾದ ಮಾರಣಾಂತಿಕ ಕಾಯಿಲೆ ಇರುವ ರೋಗಿಗಳಿಗೆ ಅವಶ್ಯವಾದ ಮಣಿಪಾಲ್ ವಿಶ್ರಾಂತಿ ಮತ್ತು ಉಪಶಾಮಕ ಆರೈಕೆ ಕೇಂದ್ರ ಮತ್ತು ಕ್ಯಾನ್ಸರ್ ಪೀಡಿತ ಮಕ್ಕಳಿಗೆ ಮತ್ತು ಅವರ ಕುಟುಂಬಗಳಿಗೆ ಮನೆಯಿಂದ ಹೊರಗೆ ಮನೆ ಸೌಲಭ್ಯದ ಕುರಿತು ಚರ್ಚಿಸಿದರು. ಎಲ್ಲಾ ಕ್ಯಾನ್ಸರ್ ರೋಗಿಗಳಿಗೆ ಅವರ ಸಾಮಾಜಿಕ ಆರ್ಥಿಕ ಸ್ಥಿತಿಯನ್ನು ಲೆಕ್ಕಿಸದೆ ಅತ್ಯುತ್ತಮ ಕೈಗೆಟುಕುವ ಗುಣಮಟ್ಟದ ಆರೈಕೆಯನ್ನು ಒದಗಿಸಲಾಗುತ್ತಿದೆ ಎಂದು ಅವರು ಪುನರುಚ್ಚರಿಸಿದರು.

ಡಾ. ಪಿ ಎಲ್ ಎನ್ ಜಿ ರಾವ್ ಅವರು ಕ್ಯಾನ್ಸರ್ ಆರೈಕೆಯನ್ನು ಹೆಚ್ಚಿಸಲು ಹೊಸ ಔಷಧ ಆವಿಷ್ಕಾರದ ಅಗತ್ಯತೆ ಮತ್ತು ಜನಸಂಖ್ಯೆಗೆ ಅನುಗುಣವಾಗಿ ಅದರ ಲಭ್ಯತೆ ಮತ್ತು ಕೈಗೆಟಕುವ ದರದ ಅವಶ್ಯಕತೆಗಳ ಕುರಿತು ಮಾಹಿತಿ ನೀಡಿದರು.

ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಡಾ. ಹೆಚ್.ಎಸ್.ಬಲ್ಲಾಳ್ ಅವರು, "ಆರಂಭದಲ್ಲೇ ಪತ್ತೆ ಹಚ್ಚುವುದು, ಉತ್ತಮ ಗುಣಮಟ್ಟದ ಚಿಕಿತ್ಸೆ ಮತ್ತು ಉಪಶಾಮಕ ಆರೈಕೆಯ ಅಗತ್ಯವನ್ನು ಒತ್ತಿ ಹೇಳಿದರು. ಅವರು ಕ್ಯಾನ್ಸರ್ ಆರೈಕೆಗೆ ಅವಶ್ಯವಿರುವ ಮಾನವೀಯ ಅಂಶ ಮತ್ತು ಅದನ್ನು ವೈದ್ಯಕೀಯ ಆರೈಕೆಯೊಂದಿಗೆ ಹೇಗೆ ಹೆಣೆದುಕೊಂಡಿರಬೇಕು ಎಂಬುವುದರ ಕುರಿತು ಒತ್ತಿ ಹೇಳಿದರು.

ಮಣಿಪಾಲ ಕಾಲೇಜ್ ಆಫ್ ಫಾರ್ಮಾಸ್ಯುಟಿಕಲ್ ಸೈನ್ಸ್‌ನ ಫಾರ್ಮಸಿ ಪ್ರಾಕ್ಟೀಸ್ ವಿಭಾಗದ ಪ್ರಾಧ್ಯಾಪಕ ಮತ್ತು ಮುಖ್ಯಸ್ಥ ಡಾ.ಮಹಾದೇವ ರಾವ್ ಅವರು ಗ್ಲೋಬಲ್ ಕ್ಯಾನ್ಸರ್ ಕನ್ಸೋರ್ಟಿಯಂ ಮತ್ತು ಅದರ ಸಹಯೋಗಿಗಳು, ಅದರ ವ್ಯಾಪ್ತಿ, ಚಟುವಟಿಕೆಗಳು ಮತ್ತು ಪರಿಣಾಮವನ್ನು ವಿವರಿಸಿದರು. ಅವರು ಒಕ್ಕೂಟದ ವೆಬ್‌ಸೈಟ್ www.glocacon.org ಅನ್ನು ಪ್ರಸ್ತುತಪಡಿಸಿದರು ಮತ್ತು ಕಳೆದ ವರ್ಷದಲ್ಲಿ ನಡೆದ ವಿವಿಧ ಸೆಮಿನಾರ್‌ಗಳು, ಸಮುದಾಯ  ಸರಣಿ ಕಾರ್ಯಕ್ರಮಗಳು  ಮತ್ತು ಸಣ್ಣ ವಿಚಾರ ಸಂಕಿರಣಗಳ ಕುರಿತು ವಿವರಿಸಿದರು. 2021 ರ ಡಿಸೆಂಬರ್ 2 ರಿಂದ 4 ರವರೆಗೆ ನಡೆಯಲಿರುವ ಮುಂಬರುವ ಮೊದಲ ವರ್ಚುವಲ್ ಸಮ್ಮೇಳನದ ಕುರಿತು ಮಾತನಾಡಿದರು.

ಮಣಿಪಾಲದ ಕಸ್ತೂರ್ಬಾ ವೈದ್ಯಕೀಯ ಕಾಲೇಜಿನ ಡೀನ್ ಡಾ.ಶರತ್ ಕುಮಾರ್ ರಾವ್ ಅವರು ತಮ್ಮ ಸ್ವಾಗತ ಭಾಷಣದಲ್ಲಿ ಮಣಿಪಾಲದ ಕ್ಯಾನ್ಸರ್ ಕೇಂದ್ರದ ಪಯಣ ಮತ್ತು ಬೆಳವಣಿಗೆಯನ್ನು ತಿಳಿಸಿದರು. ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ್ ಶೆಟ್ಟಿ  ವಂದನಾರ್ಪಣೆಗೈದರು.